## ಈ ಲೇಖನದ ವಿಷಯಾನುಕ್ರಮಣಿಕೆ


ಪ್ರತಿಮೆ, ವೃಂದಾವನಗಳನ್ನು ಮನೆಗೆ ತರಬೇಕಾದರೆ ಅನುಸರಿಸಬೇಕಾದ ನಿಯಮಗಳೇನು? 2

ಪ್ರತಿಮೆಗಳನ್ನು ಕೊಳ್ಳುವ ಮೊದಲು 3

ತರಬೇಕಾದ ಸಮಯ 5

ಶಕುನಗಳು 7

ಪ್ರಾಣಪ್ರತಿಷ್ಠಾಪನೆ 8

ಪೂಜಿಸಲ್ಪಡುತ್ತಿರುವ ವಿಗ್ರಹ ತರುವಾಗ 11

ವೃಂದಾವನಗಳ ಕುರಿತು 13

ಕಡೆಯ ಮಾತು 14

## ಪ್ರತಿಮೆ, ವೃಂದಾವನಗಳನ್ನು ಮನೆಗೆ ತರಬೇಕಾದರೆ ಅನುಸರಿಸಬೇಕಾದ ನಿಯಮಗಳೇನು?

ಗುರುಗಳೇ,

ಪೂಜೆಗಾಗಿ ಸಣ್ಣ ಪ್ರತಿಮೆಗಳನ್ನು ಅಥವಾ ಗುರುಗಳ ಬೃಂದಾವನಗಳನ್ನು ಕೊಂಡಾಗ ಮನೆಗೆ ಯಾವ ರೀತಿ ತರಬೇಕು?

— ಪ್ರಸನ್ನ ಸಿಂಹ ರಾವ್

ಇದರಲ್ಲಿ ಎರಡು ರೀತಿಯ ಸಾಧ್ಯತೆಗಳಿವೆ.

1. ಹೊಸದಾಗಿ ಪ್ರತಿಮೆ, ವೃಂದಾವನಗಳನ್ನು ನೇರವಾಗಿ ಅಂಗಡಿಯಿಂದ ತಂದಾಗ. ಅಂದರೆ, ಪ್ರತಿಮೆ ವೃಂದಾವನಗಳಲ್ಲಿ ಇನ್ನೂ ಸನ್ನಿಧಾನವಿರುವದಿಲ್ಲ.

2. ಈಗಾಗಲೇ ಪೂಜಿಸಲ್ಪಡುತ್ತಿರುವ ವಿಗ್ರಹ, ವೃಂದಾವನಗಳನ್ನು ತಂದಾಗ.

## ಪ್ರತಿಮೆಗಳನ್ನು ಕೊಳ್ಳುವ ಮೊದಲು

ಸಾಲಿಗ್ರಾಮಗಳನ್ನು ಸರ್ವಥಾ ಮಾರಬಾರದು, ಕೊಳ್ಳಬಾರದು. ಆದರೆ ಪ್ರತಿಮೆಗಳನ್ನು ಅವಶ್ಯವಾಗಿ ಕೊಳ್ಳಬಹುದು. ಈಗಾಗಲೇ ಸನ್ನಿಧಾನ ತುಂಬಿಸಿ ಪೂಜಿಸಲ್ಪಡುತ್ತಿರುವ ಪ್ರತಿಮೆಗಳನ್ನು ಎಂದಿಗೂ ಕೊಳ್ಳಬಾರದು ಮತ್ತು ಮಾರಬಾರದು.

ಅಂಗಡಿಯಲ್ಲಿ ಒಂದು ಪ್ರತಿಮೆ ಕಂಡ ತಕ್ಷಣ ಕೊಳ್ಳಬೇಡಿ. ಮೊದಲಿಗೆ ಪ್ರತಿಮೆಗಳಲ್ಲಿ ಲಕ್ಷಣವಿದೆಯೇ, ಇಲ್ಲವೇ ಎನ್ನುವದನ್ನು

ತಿಳಿಯಬೇಕು. ಅದಕ್ಕಾಗಿ ನೀವು ತಿಳಿದ ಜನರ ಸಹಾಯವನ್ನು ಪಡೆಯಬೇಕು.

ಕೆಲವು ಪ್ರತಿಮೆಗಳನ್ನು ಪೂಜಿಸಬಾರದು, ಕೆಲವು ಪ್ರತಿಮೆಗಳನ್ನು ಗೃಹಸ್ಥರು ಪೂಜಿಸಬಾರದು ಎಂದೆಲ್ಲ ಕೆಲವು ನಿಯಮಗಳಿವೆ. ಅವನ್ನು ಅವಶ್ಯವಾಗಿ ತಿಳಿದವರಿಂದ ತಿಳಿಯತಕ್ಕದ್ದು.

ಲಕ್ಷಣವಿರುವ ಪ್ರತಿಮೆಗಳೂ ಸಹ ಭಿನ್ನವಾಗಿರಬಾರದು. ಒಡೆದಿರಬಾರದು. ಕೈಬೆರಳು, ಕಾಲ್ಬೆರಳು, ಅಥವಾ ಯಾವುದೇ ಅಂಗ ಮುರಿದಿರುವ, ಮುರಿದ ನಂತರ ಮತ್ತೆ ಅಂಟಿಸಿರುವ ಪ್ರತಿಮೆಗಳನ್ನು ಪೂಜಿಸಬಾರದು.

ಮತ್ತು, ಪ್ಲಾಸ್ಟಿಕ್ಕು, ವೈಟ್ ಮೆಟಲ್, ಕಬ್ಬಿಣ, ಸ್ಟೇನ್ ಲೆಸ್ ಸ್ಟೀಲ್ ಮುಂತಾದವುಗಳಿಂದ ನಿರ್ಮಿತವಾದ, ಕೆಮಿಕಲ್ಲುಗಳ ಬಳಕೆಯಾಗಿರುವ ಪ್ರತಿಮೆಗಳನ್ನು ಪೂಜಿಸಬಾರದು. ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚಿನಿಂದ ನಿರ್ಮಿತವಾಗಿರುವ ಪ್ರತಿಮೆಗಳನ್ನು ಮಾತ್ರ ಪೂಜಿಸಬೇಕು.

ಕಲ್ಲು ಮತ್ತು ಮರಗಳಿಂದ ನಿರ್ಮಿತವಾಗಿರುವ ಪ್ರತಿಮೆಗಳನ್ನು ಪೂಜಿಸಬಹುದಾದರೂ ಅವಕ್ಕೆ ಪ್ರತ್ಯೇಕ ನಿಯಮಗಳಿವೆ. ಸಾಮಾನ್ಯವಾಗಿ ಗೃಹಸ್ಥರು ಮನೆಯಲ್ಲಿ ಪೂಜಿಸುವಂತಿಲ್ಲ.

## ತರಬೇಕಾದ ಸಮಯ

ಪ್ರತಿಮೆಯನ್ನು ಕೊಂಡ ನಂತರ ಮನೆಗೆ ಯಾವ ಸಮಯಕ್ಕೆ ತೆಗೆದುಕೊಂಡು ಹೋಗುತ್ತೀರಿ ಎನ್ನುವದು ಬಹಳ ಮುಖ್ಯ. ಮನೆಯ ಯಜಮಾನರ ತಾರಾಬಲ ಇಲ್ಲದ ದಿವಸ ಪ್ರತಿಮೆ ತರಬಾರದು. ಅಮಾವಾಸ್ಯಾ, ಗ್ರಹಣ, ಸಂಕ್ರಾಂತಿಗಳ ದಿವಸ ಪ್ರತಿಮೆಗಳನ್ನು ತರಬಾರದು.

ಯಜಮಾನನಿಗೆ ತಾರಾಬಲ ಇರುವ ದಿವಸ, ಒಳ್ಳೆಯ ಮುಹೂರ್ತದಲ್ಲಿ — ಸಾಮಾನ್ಯವಾಗಿ ಸೂರ್ಯಾಸ್ತಕ್ಕಿಂತ 24 ನಿಮಿಷಗಳ ಮುಂಚೆ ಪ್ರಶಸ್ತವಿರುತ್ತದೆ — ತರಬೇಕು.

ಮನೆಯ ಬಳಿಗೆ ಬಂದ ನಂತರ, ಪ್ರತಿಮೆಯನ್ನು ಹೊರಗೇ ತುಳಸಿಕಟ್ಟೆ ಮುಂತಾದ ಯಾವುದೇ

ಶುಭ್ರ ಪ್ರದೇಶದಲ್ಲಿಟ್ಟು , ಅದೂ ಸಾಧ್ಯವಿಲ್ಲದಿದ್ದರೆ ಮನೆಯ ಬೇರೆ ಸದಸ್ಯರ ಕೈಯಲ್ಲಿ ಕೊಟ್ಟು, ಪಾದರಕ್ಷೆಗಳನ್ನು ಬಿಚ್ಚಿ, ಶುದ್ಧ ವಸ್ತ್ರವನ್ನುಟ್ಟು ಬರಬೇಕು.

ಆ ನಂತರ ಪ್ರತಿಮೆಯನ್ನು ಉತ್ತಮ ಲೋಹದ (ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು) ತಟ್ಟೆಯಲ್ಲಿ ಅಕ್ಕಿಯನ್ನು ಹಾಕಿ, ಅದರ ಮೇಲೆ ಪ್ರತಿಮೆಯನ್ನಿಟ್ಟುಕೊಂಡು ಹೊಸ್ತಿಲ ಬಳಿಯಲ್ಲಿ ನಿಲ್ಲಬೇಕು.

ಮನೆಯ ಮುತ್ತೈದೆಯರು ಹೊಸ್ತಿಲ ಬಳಿ ಎರಡು ದೀಪಗಳನ್ನು ಹಚ್ಚಿ, ಪ್ರತಿಮೆಗೆ ಆರತಿಯನ್ನು ಮಾಡಬೇಕು. ಆ ಬಳಿಕ ಬಲಗಾಲಿಟ್ಟುಕೊಂಡು ಒಳತಂದು ತಟ್ಟೆಯ ಸಮೇತವಾಗಿ ದೇವರ ಮನೆಯ ಮುಂದಿಟ್ಟು ನಮಸ್ಕರಿಸಬೇಕು.

ಪ್ರತಿಮೆಯಲ್ಲಿ ಇನ್ನೂ ಪ್ರಾಣಪ್ರತಿಷ್ಠಾಪನೆ ಆಗಿರುವದಿಲ್ಲದ ಕಾರಣ ಅದನ್ನು ಎಲ್ಲ ಸದಸ್ಯರು ಮುಟ್ಟಿ ನೋಡಬಹುದು.

## ಶಕುನಗಳು

ಮನೆಗೆ ಪ್ರತಿಮೆ ತರುವಾಗ ಮತ್ತು ತಂದ ನಂತರ ಶಕುನಗಳನ್ನು ಗಮನಿಸಬೇಕು.

ಅಪಶಕುನಗಳುಂಟಾದಲ್ಲಿ ಅದನ್ನು ಬೇರೆಡೆ ನೀಡಿಬಿಡಬೇಕು.

ತಂದ ನಂತರ ಮನೆಯಲ್ಲಿ ಜಗಳಗಳಾಗಲೀ, ಅಥವಾ ತೀರ ಅನಾರೋಗ್ಯವಾಗಲೀ, ಅಥವಾ ಇನ್ನ್ಯಾವುದೇ ಅವಘಡಗಳು ನಡೆದಲ್ಲಿ ಅದನ್ನು ನೀಡಿಬಿಡಬೇಕು.

ಸುಮಾರು ಎರಡು ತಿಂಗಳ ಹಿಂದೆ ಒಬ್ಬ ವ್ಯಕ್ತಿ ಮನೆಗೆ ತುಂಬ ದೊಡ್ಡದಾದ ದೇವಿಯ ವಿಗ್ರಹವೊಂದನ್ನು ತಂದಿಟ್ಟರು. ಪೂಜೆಗಾಗಿ ಅಲ್ಲ, ಕೇವಲ ಮನೆಯಲ್ಲಿಡುವದಕ್ಕಾಗಿ. ಪ್ರತಿಮೆ ಬಂದ ಎರಡೇ ತಿಂಗಳಲ್ಲಿ ಅದೇ ಮನೆಯ ಮೂರು ಸದಸ್ಯರು ಮೃತರಾದರು. ಆ ನಂತರ ಪ್ರತಿಮೆಯನ್ನು ದೇವಸ್ಥಾನವೊಂದಕ್ಕೆ ನೀಡಿದ್ದಾರೆ.

ಅವಲಕ್ಷಣದ ಪ್ರತಿಮೆಗಳನ್ನು ತಂದಾಗ, ತರಬಾರದ ರೀತಿಯಲ್ಲಿ ತಂದಾಗ, ದುರ್ಮುಹೂರ್ತದ ಸಮಯದಲ್ಲಿ ತಂದಾಗ, ತಂದ ನಂತರ ಮನೆಯಲ್ಲಿ ವಿಪರೀತ ಅನಾಚಾರ ನಡೆಸಿದಾಗ ಈ ರೀತಿಯ ತೊಂದರೆಗಳುಂಟಾಗುತ್ತವೆ.

ಕೇವಲ ಪ್ರತಿಮೆಗಳಿಗಷ್ಟೇ ಅಲ್ಲ, ಯಾವುದೇ ಹೊಸದಾದ ಜಾಗ, ವಾಹನ ಮುಂತಾದವನ್ನು ಖರೀದಿಸುವ ಸಂದರ್ಭದಲ್ಲಿಯೂ ಶಕುನ ಅತ್ಯವಶ್ಯ.

ಮದುವೆಗಳ ಸಂದರ್ಭದಲ್ಲಿಯೂ ಸಹಿತ.

## ಪ್ರಾಣಪ್ರತಿಷ್ಠಾಪನೆ

ಅದಾದ ನಂತರ, ಮತ್ತೊಂದು ಉತ್ತಮ ಮುಹೂರ್ತವಿರುವ ದಿವಸ ವಿಷ್ಣುಭಕ್ತರಾದ ಸದಾಚಾರಿಗಳಾದ ಒಬ್ಬ ಬ್ರಾಹ್ಮಣರನ್ನು ಕರೆಯಿಸಿ ಅವರಿಂದ ವಿಧ್ಯುಕ್ತವಾದ ಕ್ರಮದಲ್ಲಿ ಪ್ರಾಣಪ್ರತಿಷ್ಠಾಪನೆಯನ್ನು ಮಾಡಿಸಬೇಕು. ಪ್ರಕ್ರಿಯೆ

ನಿಮಗೇ ಗೊತ್ತಿದ್ದರೆ ಅವಶ್ಯವಾಗಿ ನೀವೇ ಮಾಡಬಹುದು.

ಸಂನ್ಯಾಸಿಗಳು ಎಂದರೆ ವಿಚಾರ ಮಾಡದೇ ಅಡ್ಡ ಬೀಳುವ ಕೆಲವರು, ಪ್ರತಿಮೆಯನ್ನು ಕೆಲವು ಸಂನ್ಯಾಸಿಗಳಿಗೆ ನೀಡಿ ಅದನ್ನು ಪೂಜಿಸಿ ನೀಡಿ ಎಂದು ಕೇಳುತ್ತಾರೆ. ಅವರು ಕೇವಲ ಪೂಜಾಕಾಲದಲ್ಲಿ ಅದನ್ನಿಟ್ಟು ಅದರ ಮೇಲೆರಡು ತುಳಸೀದಳಗಳನ್ನು ಹಾಕಿ ನೀಡುವದನ್ನು ನಾನು ನೋಡಿದ್ದೇನೆ. ಇದು ತಪ್ಪು. ಆ ಪ್ರತಿಮೆಯಲ್ಲಿ ವಿಧ್ಯುಕ್ತವಾದ ಕ್ರಮದಲ್ಲಿ ಪ್ರಾಣಪ್ರತಿಷ್ಠಾಪನೆಯಾಗದೇ ಇದ್ದರೆ ಅದೊಂದು ಗೌರವಾರ್ಹವಾದ ಸಾಮಾನ್ಯ ಲೋಹದ ಪ್ರತಿಮೆಯಾಗುತ್ತದೆಯಷ್ಟೆ. ಹೊರತು, ಪೂಜನೀಯವಾಗುವದಿಲ್ಲ.

ಮತ್ತು, ಸಂನ್ಯಾಸಿಗಳ ಪೂಜಾಕ್ರಮ ಮತ್ತು ಗೃಹಸ್ಥರ ಪೂಜಾಕ್ರಮ ಅತ್ಯಂತ ವಿಭಿನ್ನ. ಎರಡನ್ನೂ ತಿಳಿದ ಸಂನ್ಯಾಸಿಗಳು ಪ್ರಾಣಪ್ರತಿಷ್ಠಾಪನೆ ಮಾಡಿ ನೀಡಿದರೆ ಅತ್ಯುತ್ತಮ. ಇಲ್ಲದಿದ್ದಲ್ಲಿ ಅನರ್ಥವೇ ಉಂಟಾಗುತ್ತದೆ.

ಇನ್ನು ಆಚಾರ್ಯಕರಾರ್ಚಿತ ಪ್ರತಿಮೆಗಳ ಪೂಜೆ ನಡೆಯಬೇಕಾದರೆ ಅಲ್ಲಿದ್ದರೂ ಸಾಕು, ಸನ್ನಿಧಾನ ಬಂದುಬಿಡುತ್ತದೆ ಎಂದು ಕೆಲವರು ತಪ್ಪು ಬಿಂಬಿಸುತ್ತಾರೆ. ಮತ್ತೆ ತಪ್ಪು. ಆಚಾರ್ಯ ಕರಾರ್ಚಿತ ಪ್ರತಿಮೆಯನ್ನು  ಸದಾ ಕಾಲ ಯಾವ ಪೆಟ್ಟಿಗೆಯಲ್ಲಿಡುತ್ತಾರೆಯೋ ಆ ಪೆಟ್ಟಿಗೆಯನ್ನು ನಾವು ಅತಿಶಯವಾಗಿ ಗೌರವಿಸುತ್ತೇವಷ್ಟೇ ಹೊರತು ಅಭಿಷೇಕ ಅರ್ಚನೆ ಮಾಡಿ ಪೂಜಿಸುವದಿಲ್ಲ. ಹೀಗಾಗಿ ಸುಮ್ಮನೇ ಅಲ್ಲಿಟ್ಟು ತಂದು ಪೂಜೆ ಮಾಡತಕ್ಕದ್ದಲ್ಲ. ಶಾಸ್ತ್ರೋಕ್ತವಾದ ಕ್ರಮದಲ್ಲಿ ಪ್ರಾಣಪ್ರತಿಷ್ಠಾಪನೆಯಾಗಲೇ ಬೇಕು. ಸ್ವಯಂ ಆಚಾರ್ಯರೇ ತಂತ್ರಸಾರಸಂಗ್ರಹದಲ್ಲಿ ಪ್ರಾಣಪ್ರತಿಷ್ಠಾಪನೆಯ ಕ್ರಮವನ್ನು ನಿರ್ಣಯಿಸಿ ತಿಳಿಸಿರುವಾಗ ನಾವು ಅದನ್ನು ಉಲ್ಲಂಘಿಸಲು ಸಾಧ್ಯವೇ?

ಹೀಗಾಗಿ ಪ್ರಥಮ ಪೂಜೆಗೂ ಮುನ್ನ ವಿಧ್ಯುಕ್ತವಾದ ಕ್ರಮದಲ್ಲಿ ಪ್ರಾಣಪ್ರತಿಷ್ಠಾಪನೆ ಅತ್ಯಂತ ಆವಶ್ಯಕ. ಸದಾಚಾರಿಗಳಾದ ವಿಷ್ಣುಭಕ್ತರಾದ, ನಿತ್ಯ ಪೂಜೆಯನ್ನು ಮಾಡುವ, ಪ್ರತಿಮಾಪೂಜೆ, ಪ್ರಾಣಪ್ರತಿಷ್ಠಾಪನೆಯ ವಿಧಿಗಳನ್ನು

ಪರಿಪೂರ್ಣವಾಗಿ ತಿಳಿದಿರುವ ನಿಮ್ಮ ಆಚಾರ್ಯರಿಂದ ಅದಕ್ಕೆ ಪೂಜೆಯನ್ನು ಮಾಡಿಸಿ, ಆ ನಂತರ, ಸಂನ್ಯಾಸಿಗಳ ಬಳಿಯಲ್ಲಿ ಅದಕ್ಕೆ ಮತ್ತೊಮ್ಮೆ ಪೂಜೆಯನ್ನು ಅವಶ್ಯವಾಗಿ ಮಾಡಿಸಿ, ಆ ಬಳಿಕ ನೀವು ಪೂಜಿಸತಕ್ಕದ್ದು.

ಪ್ರಾಣಪ್ರತಿಷ್ಠಾಪನೆಯ ದಿವಸ ಮನೆಯಲ್ಲಿ ಬ್ರಾಹ್ಮಣ ಮುತ್ತೈದೆಯರಿಗೆ ಅನ್ನದಾನ ನಡೆಯಬೇಕು.

## ಪೂಜಿಸಲ್ಪಡುತ್ತಿರುವ ವಿಗ್ರಹ ತರುವಾಗ

ತಂತ್ರಸಾರೋಕ್ತ ಕ್ರಮದಲ್ಲಿ ಪೂಜೆ ಮಾಡಲು ತಿಳಿಯದವರು, ಮತ್ತು ಪೂಜೆ ಮಾಡುವ ಅಧಿಕಾರವಿಲ್ಲದವರು ಪೂಜೆ ಮಾಡುತ್ತಿರುವ ಪ್ರತಿಮೆಗಳನ್ನು ತಂದು ಪೂಜೆ ಮಾಡಬಾರದು.

ಇನ್ನು ಹಿಂದಿನ ಮಹಾನುಭಾವರೊಬ್ಬರು ಪೂಜೆ ಮಾಡುತ್ತಿದ್ದ ಪ್ರತಿಮೆಯೆಂದು ತಿಳಿಯಲ್ಪಟ್ಟಾಗ ಅದು ದೊರೆಯುವ ಸಂದರ್ಭವಿದ್ದಾಗ ಅದನ್ನು ತಂದು ಪೂಜಿಸಬಹುದು.

ಈಗಾಗಲೇ ಪೂಜಿಸಲ್ಪಡುತ್ತಿರುವ ಪ್ರತಿಮೆಯೊಂದನ್ನು ದಾನ ನೀಡಿದಾಗ, ಅಥವಾ ಗುರುಗಳ ಸ್ಥಾನದಲ್ಲಿರುವವರು ನೀಡಿದಾಗ ಅದನ್ನು ಅತ್ಯಂತ ಭಕ್ತಿಯಿಂದ ತಂದು ಪೂಜಿಸತಕ್ಕದ್ದು.

ಈಗಾಗಲೇ ಪೂಜಿಸಲ್ಪಡುತ್ತಿರುವ ಪ್ರತಿಮೆಗಳನ್ನು ಮೈಲಿಗೆಯಲ್ಲಿ ತರಬಾರದು. ಉತ್ತಮ ಲೋಹಗಳ ಅಥವಾ ಬಿದಿರಿನ ಕೃಷ್ಣಾಜಿನದ ಒಂದು ಪೆಟ್ಟಿಗೆಯಲ್ಲಿ ಆ ಪ್ರತಿಮೆಯನ್ನು ತಂದು, ಹಿಂದೆ ಹೇಳಿದ ಪ್ರಕಾರ, ಉತ್ತಮ ಮುಹೂರ್ತವಿರುವ ದಿವಸ ಆ ಪ್ರತಿಮೆಯಿರುವ ಪೆಟ್ಟಗೆಗೇ ಆರತಿ ಮಂಗಳಾರತಿ ಮಾಡಿ ಒಳ ತಂದು, ದೇವರ ಮನೆಯಲ್ಲಿಟ್ಟು, ನೈವೇದ್ಯ, ಮಂಗಳಾರತಿ ನಮಸ್ಕಾರಗಳನ್ನು ಸಮರ್ಪಿಸಬೇಕು.

ಬಳಿಕ ಮಾರನೆಯ ದಿವಸ ಶುದ್ಧವಾದ ಮಡಿಯಲ್ಲಿ[1] ಪ್ರತಿಮೆಯನ್ನು ತೆಗೆದು ಪೂಜಿಸಬೇಕು.

---

[1] ದೇವರ ಪೂಜೆಯ ಮಡಿ ಏನು ಎನ್ನುವದನ್ನು ಮಡಿಮೈಲಿಗೆಗಳ ಲೇಖನಗಳಲ್ಲಿ ವಿವರಿಸಿದ್ದೇನೆ. Links — VNA097, VNA098, VNA099, VNA100

ಪ್ರಾಣಪ್ರತಿಷ್ಠಾಪನೆಯಾದ ಪ್ರತಿಮೆಯನ್ನು ಮೈಲಿಗೆಯಲ್ಲಿ ಮುಟ್ಟಬಾರದು. ಪೂಜೆ ಮಾಡುವವರು ಮಾತ್ರ ಶುದ್ಧ ಮಡಿಯಲ್ಲಿ ಮುಟ್ಟತಕ್ಕದ್ದು. ಇತರರು ಸ್ಪರ್ಶ ಮಾಡಬಾರದು.

ಉತ್ತಮ ಬ್ರಾಹ್ಮಣರ ಕೈಯಲ್ಲಿ ಆ ಪ್ರತಿಮೆಗೆ ವಿಶೇಷ ಪೂಜೆಯನ್ನು ಸಲ್ಲಿಸತಕ್ಕದ್ದು.

## ವೃಂದಾವನಗಳ ಕುರಿತು

ವೃಂದಾವನದಲ್ಲಿ ಸನ್ನಿಧಾನಕ್ಕಾಗಿ ಮೂಲವೃಂದಾವನದ ಮೃತ್ತಿಕೆ ಬೇಕು. ಇಲ್ಲದಿದ್ದಲ್ಲಿ ಆ ಗುರುಗಳು ಬರೆದ ಗ್ರಂಥವನ್ನೇ ಸಣ್ಣ ಲೋಹದ ಹಾಳೆಯಲ್ಲಿ ಬರೆಯಿಸಿ ವೃಂದಾವನದಲ್ಲಿಟ್ಟು ಅವಶ್ಯವಾಗಿ ಪೂಜಿಸಬಹುದು. ಆ ಗುರುಗಳ ಗ್ರಂಥ ಉಪಲಬ್ಧವಿಲ್ಲದಿದ್ದಲ್ಲಿ, ಆ ಗುರುಗಳ ಸ್ತೋತ್ರವನ್ನು ಬರೆದು ಅದರಲ್ಲಿಟ್ಟು ಪೂಜಿಸಬಹುದು.

ಇದನ್ನು ತರುವಾಗಲೂ ಮೇಲೆ ಹೇಳಿದ ಕ್ರಮಗಳನ್ನೇ ಅನುಸರಿಸತಕ್ಕದ್ದು.

## ಕಡೆಯ ಮಾತು

ನಿಮ್ಮ ಮನೆಗೆ ಕಾರೊಂದನ್ನು ತರುತ್ತೀರಿ. ನಿಮಗೆ ವಾಹನ ಚಲಾಯಿಸಲು ಬಾರದೇ ಇದ್ದಲ್ಲಿ ಎಂದಿಗೂ ನೀವು ಅದನ್ನು ತೆಗೆದುಕೊಂಡು ರಸ್ತೆಗೆ ಹೋಗುವದಿಲ್ಲ.

ಹಾಗೆಯೇ ಪ್ರತಿಮಾ ಪೂಜೆ ಮಾಡಲು ಬಾರದೇ ಇದ್ದಲ್ಲಿ ಮಾಡಲು ಹೋಗಬೇಡಿ. ಮೊದಲು ಪ್ರತಿಮಾ ಪೂಜೆ ಮಾಡುವದನ್ನು ಪೂರ್ಣವಾಗಿ ಕಲಿಯಿರಿ. ಸಾಲಿಗ್ರಾಮದ ಪೂಜೆಗೂ, ಪ್ರತಿಮಾಪೂಜೆಗೂ ತುಂಬ ವ್ಯತ್ಯಾಸಗಳಿವೆ. ಮಾಡಬೇಕಾದ ಗೋಲಕಚಿಂತನೆ, ಪೀಠಚಿಂತನೆ ಮುಂತಾದ ಅನುಸಂಧಾನಗಳಿವೆ. ಕಲಿತು ಪೂಜೆ ಆರಂಭಿಸಿ.

ಇನ್ನು ಕಲಿಯಲು ಇನ್ನೂ ಸಮಯವಿದೆ ಎಂದಾದಲ್ಲಿ, ಮನೆಯಲ್ಲಿ ಪ್ರತಿಮಾಪೂಜೆ ನಡೆಯಬೇಕು ಎಂಬ ಅಪೇಕ್ಷೆ ಇದ್ದಲ್ಲಿ ಅವಶ್ಯವಾಗಿ ಮೇಲೆ ಹೇಳಿದ ಕ್ರಮದಲ್ಲಿ ತಂದು, ಪ್ರಾಣಪ್ರತಿಷ್ಠಾಪನೆ ಮಾಡಿಸಿ ಆ ನಂತರ ಕನಿಷ್ಠ

ತಿಂಗಳಿಗೊಮ್ಮೆ ಅಥವಾ ನಿಮ್ಮ ಅನುಕೂಲಕ್ಕೆ ತಕ್ಕಂತೆ ತಿಂಗಳಿಗೆ ಅನೇಕ ಬಾರಿ ಮತ್ತೊಬ್ಬ ಆಚಾರ್ಯರನ್ನು ಕರೆಯಿಸಿ ಅವರಿಂದ ಪೂಜೆ ಮಾಡಿಸಿ. ಆದರೆ ತಿಳಿಯದೇ ಪೂಜೆ ಮಾಡಲು ಹೋಗಬೇಡಿ.

ಪ್ರತಿಮೆಗಳ ಬಗ್ಗೆ ಶುದ್ಧವಾದ ತಿಳುವಳಿಕೆ,
ಪ್ರತಿಮಾ ಪೂಜೆಯ ಜ್ಞಾನ,
ಪೂಜೆಯಲ್ಲಿ ಶ್ರದ್ಧೆ,
ಶುದ್ಧವಾದ ಪೂಜೆಯ ಸೌಭಾಗ್ಯ,
ಆ ಪೂಜೆಯ ಫಲವಾಗಿ ದೇವರ
ಪೂರ್ಣಾನುಗ್ರಹಗಳು ದೊರೆಯಲಿ
ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

Click here download Vishwanandi App

www.vishwanandini.com

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491